ಶ್ರೀ ಎಂ.ಪಿ. ಪ್ರಕಾಶ್.—ಸದ್ಯಕ್ಕೆ ಸಂದರ್ಶಕ ಸಮಿತಿಗಳು ಕಾರ್ಯನಿರ್ವಹಿಸದ ಕಾರಣ ಸರ್ಕಾರ ತಮ್ಮ ಪತ್ರ ಸಂಖ್ಯೆ : ಎಚ್‌ಎಫ್‌ಡಬ್ಲ್ಯೂ ೨೧೪ ಸಿಜಿಇ ೮೫ ದಿನಾಂಕ ೧-೧೦-೧೯೮೫ರಲ್ಲಿ ಹಾಲಿ ಸದಸ್ಯರನ್ನು ತೆಗೆದುಹಾಕಿ ಅವರ ಬದಲಿಗೆ ಹೊಸದಾಗಿ ಸಂದರ್ಶಕ ಸಮಿತಿಗಳನ್ನು ನೇಮಿಸುವವರೆಗೂ ಸಂದರ್ಶಕ ಸಮಿತಿಯ ಕಾರ್ಯನಿರ್ವಹಣೆಗಳನ್ನು ತಡೆಹಿಡಿಯಲು ಆದೇಶಿಸಿದೆ. ಆದ್ದರಿಂದ ನೂತನ ಸಂದರ್ಶಕ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಆಯಾ ಕ್ಷೇತ್ರದ ಶಾಸಕರನ್ನು ಸಂದರ್ಶನ ಸಮಿತಿ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಿಯಮ ಇದೆ. ಜನರಲ್ ಪೊಲಿಸಿ ಆ ರೀತಿ ಇದ್ದರೂ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಸರ್ಕಾರ ಪಕ್ಷಾಂಧತೆಯಿಂದ ಕಾರ್ಯಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಆ ರೀತಿ ಮಾಡಬೇಡಿ.

ಅಧ್ಯಕ್ಷರು.—ಅದನ್ನು ಚೆಕ್‌ಅಪ್ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—ಎರಡು ವರ್ಷಗಳ ಹಿಂದೆ ಇದು ಆಗಿರತಕ್ಕದ್ದು. ಈ ವಿಚಾರದಲ್ಲಿ ನಾನೂ ಕೂಡ ಬರೆದಿದ್ದೇನೆ. ಒಂದೇ ಕೋಮಿನ ಐದು ಜನ ಇರತಕ್ಕದ್ದು ಎನ್ನುವಾದ ವಿಚಾರ. ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

(೭) ಗ್ರಾಮಾಂತರ ಪ್ರದೇಶಗಳಲ್ಲಿ ವೃತ್ತಿಪರ ಶಿಕ್ಷಣ ಕೊಡುವುದರ ಬಗ್ಗೆ.

ಶ್ರೀ ಬಸವರಾಜ್ (ಬ್ರಹ್ಮಾವರ).—ಕೇಂದ್ರ ಸರ್ಕಾರದ ಅನೇಕ ಸಂಸ್ಥೆಗಳು ಒಟ್ಟು ಸೇರಿ ಗ್ರಾಮಾಂತರ ಪ್ರದೇಶಗಳಲ್ಲಿ ವೃತ್ತಿಪರ ಶಿಕ್ಷಣವನ್ನು ಪಡೆಯುವವರ ಸಂಖ್ಯೆ ಹೆಚ್ಚಾಗಬೇಕೆಂಬ ದೃಷ್ಟಿಯಿಂದ ಬರೀ ಪಾಠಗಳನ್ನು ಬೋಧಿಸುವುದರಿಂದ ವಿದ್ಯಾರ್ಥಿಗಳಿಗೆ ಕಲಿಯುವಿಕೆಯಲ್ಲಿ ಹುಮ್ಮಸ್ಸನ್ನು ಉಂಟು ಮಾಡುವುದಿಲ್ಲವೆಂಬದೃಷ್ಟಿಯಿಂದ ಪಾಠಗಳ ಜೊತೆಯಲ್ಲಿಯೇ ಹಲವುವಿಧದ ತಾಂತ್ರಿಕ ವಿಷಯಗಳಲ್ಲಿ ಸಣ್ಣವಯಕ್ಕಳಿಗೆ ತಿಳುವಳಿಕೆ ಕೊಡಬೇಕೆಂಬುದಾಗಿ ನಿರ್ಧರಿಸಿದರು. ಅದಕ್ಕಾಗಿ ಪ್ರತಿಯೊಂದು ಕೇಂದ್ರದಲ್ಲಿ ಫಿಟ್ಟಿಂಗ್,ಟರ್ನರ್,ಷೀಟ್‌ಮೆಟಲ್-ವೆಲ್ಡಿಂಗ್,ಮೌಲ್ಡಿಂಗ್ ಬ್ಲಾಕ್‌ಸ್ಮಿತ್ ಮಂತ್ರ ಕಾರ್‌ಪೆಂಟರ್ ಎಂಬ ೭ ವಿಧದ ವೃತ್ತಿಗಳನ್ನು ಸಾಮಾನ್ಯ ಪಾಠದ ಜೊತೆಯಲ್ಲಿಯೇ ಕಲಿಸಬೇಕೆಂಬುದಾಗಿ ನಿರ್ಧರಿಸಿದರು ನಮ್ಮ ಕರ್ನಾಟಕದಲ್ಲಿ ಒಟ್ಟು ೭ ವೃತ್ತಿಪೂರ್ಣ ತರಬೇತಿ ಕೇಂದ್ರಗಳಿದ್ದು ಅವುಗಳಲ್ಲಿ ನನ್ನ ಕ್ಷೇತ್ರವಾದ ಕೋಟದಲ್ಲಿ ಒಂದು ಕೇಂದ್ರವು ೧೯೭೪ ಜುಲೈ ೭ನೇ ತಾರೀಖು ವಿವೇಕ ಜೂನಿಯರ್ ಕಾಲೇಜಿನಲ್ಲಿ ಪ್ರಾರಂಭಗೊಂಡಿದೆ. ಅದಕ್ಕೆ ಸ್ವಂತ ಕಟ್ಟಡವಿದ್ದು ೧೯೭೪ರಿಂದ ರಾಜ್ಯ ಸರ್ಕಾರವು ಅದನ್ನು ವಹಿಸಿಕೊಂಡಿದ್ದು ಅದರ ಜವಾಬ್ದಾರಿಯನ್ನು ನಿರ್ದೇಶಕರು, ಸಾರ್ವಜನಿಕ ಇಲಾಖೆ (ಸಂಶೋಧನೆ ಮತ್ತು ತರಬೇತಿ, ಬೆಂಗಳೂರು) ಇವರ ವತಿಯಿಂದ ನಡೆದುಕೊಂಡು ಬರುತ್ತಿದ್ದಾರೆ. ಆದರೆ ಇದರ ಕಟ್ಟಡವು ಇಲ್ಲಿಯವರೆಗೆ ಯಾವ ರೀತಿಯ ರಿಪೇರಿಯೂ ಆಗಲಿಲ್ಲ. ಮಾಡಿನ ಮೇಲೆ ಗಾಳಿಯಿಂದ ಮರ ಬಿದ್ದು ತಗಡಿನ ಶೀಟು ಹಾಳಾಗಿ ಮಳೆ ನೀರು ಸರಾಗವಾಗಿ ಕಟ್ಟಡದ ಒಳಗೆ ಬೀಳುತ್ತದೆ, ಇದರ ಮುಂದಿನ ಶೆಲ್ಟರ್ ಪೂರ್ಣವಾಗಿ ಹಾಳಾಗಿದ್ದು ಅದನ್ನು ತೆರೆಯಲು ಮುಚ್ಚಲು ಸಾಧ್ಯವಿಲ್ಲದೆ ಬಿದ್ದಿರುತ್ತದೆ. ಹಾಗಾಗಿ ಇದರ ಒಳಗೆ ಸಾಧಾರಣ ೧ ಲಕ್ಷ ರೂಪಾಯಿಗೂ ಹೆಚ್ಚಿನ ಉತ್ತಮ ರೀತಿಯ ಪರದೇಶದಲ್ಲಿ ತಯಾರಾದ ಕೈ ಉಪಕರಣ ಯಂತ್ರಗಳು ಹಾನಿಯಾಗುವ ಸಂಭವವಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಮಾಡಿನ ರಿಪೇರಿಯನ್ನು ಮಾಡಿಸಬೇಕು ಮತ್ತು ಅಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ೧೯೭೪ರಿಂದ ತಿಂಗಳಿಗೆ ಕೊಡುತ್ತಿದ್ದ ರೂ. ೧೦-೦೦ ವಿದ್ಯಾರ್ಥಿವೇತನವನ್ನು ಪಡೆಯುತ್ತಿದ್ದು ಅದನ್ನು ತಿಂಗಳಿಗೆ ೬೦ ರೂಪಾಯಿಯೆಷ್ಟಾದರೂ ಏರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

(೮) ಕರ್ನಾಟಕದಿಂದ ಕೇರಳಕ್ಕೆ ಹುಲ್ಲಂ ಕಳ್ಳಸಾಗಾಣಿಕೆಯಾಗುತ್ತಿರುವ ಬಗ್ಗೆ.

ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ರಾಜ್ಯವು ತೀವ್ರತರವಾದ ಬರಗಾಲವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಪ್ರತಿದಿನವೂ ಹುಲ್ಲಂ ಸಾಗಾಣಿಕೆಯಾಗುತ್ತಿದ್ದು ಯಾವ ಅಧಿಕಾರಿಗಳೂ ಇತ್ತ ಗಮನ ಹರಿಸದಿರುವುದು ವಿಷಾದನೀಯ ಮತ್ತು ಖಂಡನೀಯ.